ವಾಯುವಿಹಾರ ಹೋಗುವ ನಾನಾ ತರಹದ ಮಂದಿಯನ್ನು ನೋಡಿದಾಗ, ಇವರೆಲ್ಲಾ ಮಾಡ್ತಾ ಇರೋದು 'ಉದರ ನಿಮಿತ್ತಂ' ಎಂದೆನಿಸಿತು! ಬೇಡ ಎಂದ್ರೂ ಮುಂದೆ ಬರ್ತಾ ಇರೋ ಉದರವನ್ನು ಹಿಂದಕ್ಕೆ ತಳ್ಳಲು ತಾನೇ, ಈ ಕ್ಲಿಷ್ಟ ಕಾಯಕವನ್ನು ಕಷ್ಟಪಟ್ಟಾದ್ರೂ ಕೈಗೊಳ್ಳೋದು!

ಹೊಟ್ಟೆ ಎಂಬುದು ಅರಿವಿಗೆ ಬರದೇ ಹೊರಹೊಮ್ಮಿ ಬಿಡುವ ಸೋಜಿಗ. ದಿನನಿತ್ಯ ಕನ್ನಡಿ ಎದುರು ನಿಂತು ನೋಡುವಾಗ ತಿಳಿಯದೇ ಹೋಗುವ ವ್ಯತ್ಯಾಸ, ತೊಡುವ ಉಡುಗೆಗಳು ಏಕಾಏಕೀ ಟೈಟಾಗಲಾರಂಭಿಸಿದಾಗ ಗಮನಕ್ಕೆ ಬರಲಾರಂಭಿಸುವುದು ಎಲ್ಲ ಸ್ಥೂಲ ಉದರಿಗಳ ಅನುಭವ. ಪ್ರತಿದಿನ ನೋಡುವವರ ಗಮನಕ್ಕೆ ಬರದ ಈ ಬೆಳವಣಿಗೆಯನ್ನು ಥಟ್ಟನೇ ಗುರುತಿಸಿಬಿಡುವವರೆಂದರೆ, ಅಪರೂಪಕ್ಕೆ ಸಿಗುವ ಆತ್ಮೀಯರು. 'ಏನ್ರೀ ಇದು? ಈ ಥರಾ ಆಗಿ ಬಿಟ್ಟಿದ್ದೀರಿ!', 'ಒಡೆದು ಹೋದೀತೋ ಮಾರಾಯ ಜೋಪಾನ!', 'ಸ್ವಾಮೀ, ತಮಗೆಷ್ಟು ತಿಂಗಳು?' ಎಂಬಿತ್ಯಾದಿ ಕಾಮೆಂಟುಗಳನ್ನು ಸಾರ್ವಜನಿಕವಾಗಿ ಎಸೆದಾಗಲೇ, 'ಮಧ್ಯಮಾದೇವ'ನಂತೆ ಉಪಸ್ಥಿತವಾಗಿರುವ ಈ ಅಂಗದ ಮೇಲೆ ಮಹಾಕೋಪ ಬರುವುದು! ಆಗ ಬಲಾತ್ಕಾರವಾಗಿ ಉಸಿರೆಳೆದುಕೊಂಡು, ಉದರ ಮಹಾಶಯನನ್ನು ಹಿಂದಕ್ಕಿರಿಸಿಕೊಳ್ಳಲೆತ್ನಿಸಿ, 'ಇಲ್ವಲ್ಲಾ, ಹಾಗೇ ಇದ್ದೀನಲ್ಲ...' ಎಂಬಿತ್ಯಾದಿ ಸಮಜಾಯಿಷಿ ನೀಡಿ ತಪ್ಪಿಸಿಕೊಳ್ಳಲೆತ್ನಿಸುವುದು, ಮಹೋದರಿಗಳ ಪರಿ.

ಆರಂಭದಲ್ಲಿ ಕೆಲವರು ಇದನ್ನು **Sign of prosperity** ಎಂದು ಪ್ರಶಂಸಿಸುತ್ತಾರಾದರೂ, ಉದರ ಕೇವಲ ಪ್ರಗತಿಯ ಸಂಕೇತವಷ್ಟೇ ಅಲ್ಲ – ಮಧುಮೇಹ, ಬಿ.ಪಿ.ಗಳಂತಹ ಬಂದರೆ ಹೋಗದ ಕಾಯಿಲೆಗಳ ಸ್ನೇಹಿತನೂ ಹೌದೆಂಬ ಸತ್ಯದ ಅರಿವಾಗಿ, ಅದನ್ನಿಳಿಸುವ ಸರ್ಕಸ್‌ಗಳನ್ನು ಪ್ರಾರಂಭಿಸಬೇಕಾಗುತ್ತದೆ. ಬೆಳಗಿನ ಚಳಿಯಲ್ಲಿ ಮುಂಜಾವಿನ ಸವಿನಿದ್ದೆಯನ್ನು ವರ್ಜಿಸಿ, ಓಡಬೇಕಾದಾಗ, ಈ ಹಾಳು ಹೊಟ್ಟೆಯ ದೆಸೆಯಿಂದ ಕೈಕಾಲು, ಚರ್ಮ ಎಲ್ಲವನ್ನು ದಣಿಸಬೇಕಾಗುತ್ತದೆ. ಅಂತೆಯೇ ರಾತ್ರಿಯ ಉಪವಾಸ, ಮಿತಾಹಾರ ಇತ್ಯಾದಿಗಳನ್ನೂ ಶುರು ಮಾಡಿ, ಜಿಹ್ವೆಗೂ ಕಡಿವಾಣ ಹಾಕಬೇಕಾಗಿ ಬಂದು 'ಎಲ್ಲಾ ಈ ದರಿದ್ರ ಹೊಟ್ಟೆಯಿಂದಲೇ' ಎಂದು ಉದರಕ್ಕೆ ಶಾಪ ಹಾಕಬೇಕಾಗುತ್ತದೆ.

'ಮಹೋದರ' ಕೆಲವು ಮಹೋದಯರ, ಪ್ರತಿಷ್ಠೆಯ ಲಾಂಛನವೂ ಹೌದು. ಸ್ವಾತಂತ್ರ್ಯಪೂರ್ವದ ದೇಶಭಕ್ತರು, ಗಾಂಧೀ ಟೋಪಿ, ಸೊರಗಿದ ಶರೀರಗಳಿಂದ ಗುರುತಿಸಲ್ಪಟ್ಟರೆ, ಸ್ವಾತಂತ್ರ್ಯೋತ್ತರದ ದೇಶಭಕ್ತರು ತಮ್ಮ ಮಹೋದರದಿಂದಲೇ ಜನಜನಿತರಾಗಿದ್ದಾರೆ. ಅಂತೆಯೇ ಇವರ (ಕು) ಕೃತ್ಯಗಳೆಲ್ಲಾ, 'ಉದರ ನಿಮಿತ್ತಂ'ಗಾಗಿಯೇ! ದೊಡ್ಡ ಹೊಟ್ಟೆ ಹೊತ್ತವರು ನಮ್ಮ ದೇಶದ ಜನನಾಯಕರು ಮಾತ್ರವಲ್ಲ, ಚೀನಾದ ಕ್ರಾಂತಿಕಾರಿ ನಾಯಕ ಮಾವೋತ್ಸೆತುಂಗರನ್ನು ಕಂಬಾರರು 'ಮರೆತೆನೆಂದರ ಮರೆಯಲಿ ಹ್ಯಾಂಗ...' ಎಂದು ನೆನಪಿಸಿಕೊಳ್ಳುವಾಗ ಅವರ ದೊಡ್ಡ ಹೊಟ್ಟೆಯ ಕುಳ್ಳ ಶರೀರವನ್ನು ನೆನಪಿಸಿಕೊಳ್ಳುತ್ತಾರೆ!

ತನ್ನ ಲಂಬೋದರದಿಂದಲೇ ಖ್ಯಾತನಾಗಿರುವ ಗಣೇಶನನ್ನು ಭಜಿಸುವಾಗ, ಅವನ ಉದರವೇ ಸೌಂದರ್ಯವಾಗಿ ವರ್ಣನೆಗೊಂಡಿದೆ. ಆದರೆ ಭಕ್ತ ಮಹಾಶಯರ ಉದರ ವಿನಾಯಕನ ಉದರದಂತೆ ಆಗತೊಡಗಿದಾಗ, ಹಾಸ್ಯ, ವ್ಯಂಗ್ಯದ ವಸ್ತುವಾಗಿಬಿಡುತ್ತದೆ. ತುಂಬಿದ ಬಸ್ಸಲ್ಲಿ, ಹೊಟ್ಟೆ ಅದನ್ನು ಹೊತ್ತವರಿಗೂ, ಸುತ್ತಮುತ್ತ ನಿಂತವರಿಗೂ, ಅಡಚಣೆಯ ವಸ್ತುವಾಗಿ ಕಾಡಲಾರಂಭಿಸುತ್ತದೆ. ಇಬ್ಬರು ಕೂರೋ ಸೀಟಲ್ಲಿ, ಮಹೋದರಿಗಳು ಆಸೀನರಾದರೆ, ಮತ್ತೊಬ್ಬರಿಗೆ ಸಿಗೋದು ಅರ್ಧ ಸೀಟು ಮಾತ್ರ. ಹೀಗಾಗಿ, 'ಇವನಿಗೆ, ಎರಡು ಟಿಕೇಟು ತಗೋಬೇಕು ಮಾರಾಯ' ಎಂಬುದು ಸ್ನೇಹಿತರೊಡನೆ ಪ್ರಯಾಣ ಹೊರಟಾಗ, ಸ್ಥೂಲಕಾಯಿಗಳು ಕೇಳಲೇಬೇಕಾದ ಕಾಮೆಂಟ್.

'ಹೊಟ್ಟೆಯೊಂದರ ರಗಳೆ ಸಾಲದೆಂದೇನೋ
ವಿಧಿ
ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರರೊಳ್'

ಎಂದು ಡಿ.ವಿ.ಜಿ.ಯವರು, ಹೊಟ್ಟೆಯ, ಭೌತಿಕ, ಆಂತರಿಕ ರಗಳೆಗಳ ಕುರಿತು ಹೇಳುತ್ತಾರೆ. ಮನುಷ್ಯನಿಗೆ ಹೊಟ್ಟೆಯದೇ ರಗಳೆ. ಹೊಟ್ಟೆಗಿಲ್ಲದವರಿಗೆ, ಹೊಟ್ಟೆಗಿಲ್ಲವಲ್ಲಾ ಎಂಬ ರಗಳೆ. ಹೊಟ್ಟೆಗೆ ಹೆಚ್ಚಾದವರಿಗೆ, ಅದು ಮುಂದೆ ಬರ್ತಾ ಇದೆಯಲ್ಲಾ ಎಂಬ ಚಿಂತೆ. ಅದೂ ಸಾಲದೆಂಬಂತೆ, ಕಿಡಿಯಂತೆ ಸುಡುವ ಹೊಟ್ಟೆಕಿಚ್ಚೆಂಬ ಭಾವ ಬೇರೆ! ಈ ಅಸೂಯೆ ಹುಟ್ಟೋದು ಮನಸ್ಸಿನಲ್ಲಿಯಾದರೂ, ಅದು ಹೊಟ್ಟೆಯ ಅನಂತ ಆಸೆ–ಆಕಾಂಕ್ಷೆಗಳ ಪೂರೈಕೆಗೆ ಹುಟ್ಟುವ ಭಾವವಾದ್ದರಿಂದ, ಹೊಟ್ಟೆಕಿಚ್ಚೆಂದೇ ಕುಖ್ಯಾತವಾಗಿದೆ.

ಇಂದಿನ 'ಶುಗರ್ ಫ್ರೀ' ಯುಗದಲ್ಲಿ ಎಲ್ಲರೂ ಸ್ಲಿಮ್–ಟ್ರಿಮ್ ಆಗಿ ಇರಬಯಸುತ್ತಾರಾದ್ದರಿಂದ, 'ಹೊಟ್ಟೆ ನಿನ್ನಿಂದ ನಾ ಕೆಟ್ಟೆ!' ಎಂದು ಕೂಳು ದಕ್ಕದವರು ಗೋಳಿಡುವಂತೆಯೇ ಹೊಟ್ಟೆಯಿಂದಲೇ ಅವಿವಾಹಿತರಾಗಿ ಉಳಿದಿರುವ ಮಹೋದರಿಗಳೂ ಗೋಳಿಡುತ್ತಾರೆ.

ಹೊಟ್ಟೆಯ ಹಸಿವೆಂಬುದು ಸಮಾನತೆಯ ಪ್ರತಿರೂಪ. ಪ್ರಮಾಣ ಬೇರೆಬೇರೆಯಾಗಿರಬಹುದು, ಇದು ಎಲ್ಲಾ ವರ್ಗದವರನ್ನೂ ಕಾಡುವಂಥಾದ್ದು, ಬಡವ–ಶ್ರೀಮಂತ, ಜಾಣ–ದಡ್ಡ, ಗಂಡು–ಹೆಣ್ಣು, ಹೀಗೆ ಯಾವುದೇ ಭೇದವಿರದೇ ಎಲ್ಲರ ಒಡಲೊಳಗಿಂದಲೂ ಕೇಳಿಬರುವ ಹಸಿವಿನ ಕೂಗು ಏಕ ರೀತಿಯದ್ದು. ಸನ್ನಿವೇಶದ ಗಾಂಭೀರ್ಯ ಏನೇ ಇರಲಿ, ಹೊಟ್ಟೆ ತೃಪ್ತವಾಗಿದ್ದಾಗ ಮಾತ್ರ ಸರಿಯಾದ ಪ್ರತಿಕ್ರಿಯೆ ನಿರೀಕ್ಷಿಸಬಹುದು. ಅದಕ್ಕಾಗಿಯೇ ದ.ರಾ. ಬೇಂದ್ರೆಯವರು, 'ಯಾರಿಗೆ ಬೇಕಾಗೈತೋ ನಿನ್ನ ಕವಿ'ತಾ'? ಮೊದಲು ರೊಟ್ಟಿ'ತಾ', ಅದರ ಮೇಲೆ ಬೆಣ್ಣೆ'ತಾ'? ಎಂದು ಮಾರ್ಮಿಕವಾಗಿ ಹೇಳಿರುವುದು. ಹೊಟ್ಟೆ ತಣ್ಣಗಾದ ಮೇಲೆ ತಾನೆ, ಕಥೆ–ಕವಿತೆ ಕೇಳುವ ತಾಳ್ಮೆ?



ಹುಟ್ಟಿದ ಮಗು ಅತ್ತು ಕರೆದು ಅವಲತ್ತು ತೋಡಿಕೊಳ್ಳುವುದು ಹೊಟ್ಟೆಗಾಗಿಯೇ. ಅಲ್ಲಿಂದ ಆರಂಭವಾಗುವ ಉದರದ ನಿರಂತರ ತುಡಿತ ನಿಲ್ಲುವುದು ಉಸಿರು ನಿಂತಾಗಲೇ. ಹೀಗಾಗಿಯೇ ಉದರವೇ ಜಗತ್ತಿನಲ್ಲಿ ಸಾಟಿ ಇರದ ದೇವರು.

ಪ್ರತಿಕ್ರಿಯಿಸಿ:
**feedback@sudha.co.in**